(ದಿನಾಂಕ 29-07-2026 ರಂದು ಸಾಕ್ಷಿಯನ್ನು ಕರೆಯಿಸಿ
ಪ್ರಮಾಣೀಕರಿಸಲಾಯಿತು.)

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜೆ.ಎಸ್. ವಕೀಲರಿಂದಃ-**

**1.** ನನ್ನ ಹೆಸರು ರೇಣುಕಮ್ಮ, ಈಗ ನನಗೆ ಸುಮಾರು **50** ವರ್ಷ ಇರಬಹುದು. ನಾನು ವಿದ್ಯಾಭ್ಯಾಸ ಮಾಡಿಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತು ಅದನ್ನು ನಾನೇ ಹೇಳಿ ಬರೆಸಿದ್ದೇನೆ, ಏನು ಅಂತಾ ಹೇಳಿ ಬರೆಸಿರುತ್ತೇನೆ ಎಂದು ನನಗೆ ಹೇಳಲು ಬರುವುದಿಲ್ಲ, ಸಾಕ್ಷಿಯು ಮುಂದುವರೆದು ಈ ಅಸ್ತಿ ನಮ್ಮ ಅತ್ತೆಗೆ ಮತ್ತು ಮಾವನವರದ್ದು ಅವರಿಗೆ **4** ಜನ ಗಂಡು ಮಕ್ಕಳು, **4** ಜನ ಸೇರಿ ಹಂಚಿಕೊಂಡಿರುತ್ತಾರೆ ಎಂದು ಬರೆಸಿರುತ್ತೇನೆ. ನನ್ನ ಸಾಕ್ಷಿ ಪ್ರಮಾ ಣಪತ್ರವನ್ನು ನನಗೆ ಓದಿ ಹೇಳಿಲ್ಲ ಆದರೆ ನಾನೇ ಬರೆಸಿದ್ದೇನೆ. ಸದರಿ ಸಾಕ್ಷಿ ಪ್ರಮಾಣ ಪತ್ರಕ್ಕೆ ಸಹಿ ಮಾಡು ಅಂದ ಮೇರೆಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ಸಂಪೂರ್ಣವಾಗಿ ನನಗೆ ಗೊತ್ತಿಲ್ಲ ಅಂದರೆ ಸರಿ.

**2.** ದಾವಾ ಅಸ್ತಿಗಳ ಸರ್ವೆ ನಂ **368, 369** ಮತ್ತು **370** ಇರುತ್ತದೆ. ಸದರಿ ಜಮೀನುಗಳ ಸಬ್ ನಂಬರು ನನಗೆ ಗೊತ್ತಿಲ್ಲ. ಆದರೆ ಅದು ಒಟ್ಟು **17** ಎಕರೆ ಚಿಲ್ಲರೆ ಇದೆ. ಸದರಿ **3** ಸರ್ವೆನಂಬರುಗಳು ಎಷ್ಟು ಎಷ್ಟು ಎಕರೆ ಇದೆ ಎಂದು ನನಗೆ ಹೇಳಲು ಬರುವುದಿಲ್ಲ ಆದರೆ ಅದು ಒಂದೇ ಪಟ್ಟೆ ಆಗಿರುತ್ತದೆ.

**3.** ಸದರಿ ಜಮೀನುಗಳ ಚೆಕ್ಕು ಬಂದಿ ನನಗೆ ಹೇಳಲು ಬರುವುದಿಲ್ಲ. ***ಪೂರ್ವಕ್ಕೆ*** ಡ್ಯಾಮ್, ***ಪಶ್ಚಿಮಕ್ಕೆ*** ಕಿಳಿಕ್ಯಾತ ಹೊಲ, ***ಉತ್ತರಕ್ಕೆ*** ತೊಗರಿ ಹನುಮಪ್ಪ, ***ದಕ್ಷಿಣಕ್ಕೆ*** ಪೂಜಾರ ದುರುಗಪ್ಪ ಮತ್ತು ದಂಡೆಪ್ಪ ಇವರ ಜಮೀನು.

**4.** ದಾವಾ ಅಸ್ತಿಗಳು ಮೂಲತಃ ನಮ್ಮ ಅತ್ತೆಗೆ ಸೀತಮ್ಮ ಮತ್ತು ಮಾವ ನಿಂಗಪ್ಪ ಇವರದ್ದು. ಸದರಿ ಆಸ್ತಿಗಳು ನನ್ನ ಅತ್ತೆ ಮಾವನಿಗೆ ಅವರ ಹಿರಿಯರಿಂದ ಬಂದಿರುತ್ತದೆ, ಅವರ ಹೆಸರು ನನಗೆ ಗೊತ್ತಿಲ್ಲ. ನಿಮ್ಮ ಅತ್ತೆಗೆ ಮತ್ತು ಮಾವ ಇವರಿಗೆ ದಾವಾ ಅಸ್ತಿ ಹೇಗೆ ಬಂತು ಅಂದರೆ ಸಾಕ್ಷಿಯು ಅವರ ಮಕ್ಕಳು ಎಂದು ಅವರ ತಂದೆಯವರು ಅವರಿಗೆ ಕೊಟ್ಟಿದ್ದಾರೆ ಅನ್ನುತ್ತಾರೆ. ನನ್ನ ಅತ್ತೆ ಮಾವನವರಿಗೆ ಸದರಿ ಅಸ್ತಿ ಯಾವ ಅಧಾರದ ಮೂಲಕ ಬಂತು ಅನ್ನುವುದು ನನಗೆ ಗೊತ್ತಿಲ್ಲ. ದಾವಾ ಅಸ್ತಿಗಳ ಬಗ್ಗೆ ನನಗೆ ಈಗ ಸುಮಾರು **40** ವರ್ಷಗಳಿಂದ ಮಾಹಿತಿ ಇದೆ. ನನಗೆ ಆ ರೀತಿ ಮಾಹಿತಿ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಈ ದಾವೆಯನ್ನು ನಾನು ವಿಜಯ ಇವರ ಮೇಲೆ ಹಾಕಿದ್ದೇನೆ, ಅವರು ಯಾರು ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಯ ತಂದೆ ವೆಂಕಟರಮಣ ಶೆಟ್ಟಿ ಅವರು ನಿಮಗೆ ಗೊತ್ತಾ ಅಂದರೆ ಇಲ್ಲ. ದಾವಾ **1** ಮತ್ತು **2**ನೇ ಆಸ್ತಿಯಲ್ಲಿ ಪ್ರತಿವಾದಿಯ ತಂದೆ ತಲಾ **3** ಎಕರೆ ಜಮೀನನ್ನು ಸನ್ **1969** ರಲ್ಲಿ ಖರೀದಿ ಮಾಡಿರುತ್ತಾರೆ ಅಂದರೆ ಸುಳ್ಳು. ಅದನ್ನು ಅವರು ನಾಗರಕಟ್ಟಿ ಪಕ್ಕೀರಪ್ಪ ಮತ್ತು ತಿಂದವ್ವ ಇವರಿಂದ ಖರೀದಿ ಮಾಡಿರುತ್ತಾರೆ ಅಂದರೆ ಸುಳ್ಳು. ಕೀಳಿ ಕ್ಯಾತವ್ವರ ತಿಂದವ್ವ ಯಾರು ಎಂದು ನನಗೆ

ಗೊತ್ತಿಲ್ಲ ಅವರ ಮಕ್ಕಳು ಮತ್ತು ಮೊಮ್ಮಕ್ಕಳು ನನಗೆ ಗೊತ್ತು. ಉಳುವತ್ತಿಯಲ್ಲಿರುವ ನಾಗರಟ್ಟಿ ಮಲ್ಲಪ್ಪನ ಮಗ ಪಕ್ಕೀರಪ್ಪ ಯಾರು ಎಂದು ನನಗೆ ಗೊತ್ತಿಲ್ಲ.

**5.** ದಾವಾ **1** ಮತ್ತು **2**ನೇ ಆಸ್ತಿಗಳಲ್ಲಿ ತಲಾ **3-3** ಎಕರೆ ಜಮೀನುಗಳನ್ನು ದಿನಾಂಕ **22.03.1944** ರಂದು ನಾಗರಕಟ್ಟಿ ಪಕ್ಕೀರಪ್ಪ ಇವರು ಸಂಗನಬಸ್ಸಪ್ಪ ಇವರಿಂದ ಖರೀದಿಸಿರುತ್ತಾರೆ ಅಂದರೆ ಸುಳ್ಳು. ಸದರಿ ಎರಡೂ ಆಸ್ತಿಗಳನ್ನು ಪಕ್ಕೀರಪ್ಪ ಇವರು ಖರೀದಿ ಮಾಡಿರುವುದರಿಂದ ಅವರಿಗೆ ಅದನ್ನು ಮಾರಾಟ ಮಾಡುವ ಸಂಪೂರ್ಣ ಹಕ್ಕು ಇತ್ತು ಅಂದರೆ ಸರಿಯಲ್ಲ. ನನ್ನ ಅತ್ತೆಗೆ ಸೀತಮ್ಮ ಇವರಿಗೆ ದಾವಾ ಅಸ್ತಿ ಯಾವ ವರ್ಷದಲ್ಲ ಬಂತು ಎಂದು ನನಗೆ ಗೊತ್ತಿಲ್ಲ. ನಾವು **4** ಜನ ಅಣ್ಣ ತಮ್ಮಂದಿರು ದಾವಾ ಆಸ್ತಿಗಳನ್ನು ನಮ್ಮ ಹೆಸರಿಗೆ ಮಾಡಿ ಕೊಡಿ ಎಂದು ಯಾವತ್ತೂ ಅರ್ಜಿಗಳನ್ನು ನೀಡಿಲ್ಲ.

**6.** ದಾವಾ **1** ಮತ್ತು **2**ನೇ ಆಸ್ತಿಗಳನ್ನು ನನ್ನ ಹೆಸರಿಗೆ ಮಾಡಿಸಿಕೊಡಿ ಎಂದು ತಹಶಿಲ್ದಾರ ಕಚೇರಿಗೆ ನಾನು ಹಕ್ಕು ಬದಲಾವಣೆಗೆ ಅರ್ಜಿ ನೀಡಿದ್ದೆ ಅಂದರೆ ಸುಳ್ಳು. ಅದಕ್ಕೆ ಪ್ರತಿವಾದಿಯು ತಕರಾರನ್ನು ಸಲ್ಲಿಸಿರುತ್ತಾರೆ ಅಂದರೆ ಸುಳ್ಳು. ಸದರಿ ಅರ್ಜಿಯ ಮೇಲೆ ತಹಶಿಲ್ದಾರವರು **2010** ರಲ್ಲಿ ವಿವರವಾಗಿ ವಿಚಾರ ಮಾಡಿ ಇದು ನನ್ನ ವ್ಯಾಪ್ತಿಗೆ ಬರುವುದಿಲ್ಲ, ಎ.ಸಿ ಕಾರ್ಯಾಲಯಕ್ಕೆ ಹೋಗಿ ಪರಿಹಾರವನ್ನು ಕಂಡುಕೊಳ್ಳಿ ಅಂತಾ ಆದೇಶ ಮಾಡಿರುತ್ತಾರೆ ಅಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ

ಮಾಡಿರಬಹುದು ಅನ್ನುತ್ತಾರೆ. ಪ್ರತಿವಾದಿಯು ಎ.ಸಿ ನ್ಯಾಯಾಲಯದಲ್ಲಿ ಮೆಲ್ಮನವಿ ಸಲ್ಲಿಸಿರುತ್ತಾನೆ, ಸದರಿ ಮೇಲ್ಮನವಿಯಲ್ಲಿ ನಾನೂ ಸಹ ಹಾಜರಾಗಿರುತ್ತೇನೆ ಅಂದರೆ ಸುಳ್ಳು. ಸದರಿ ಮೇಲ್ಮನವಿಯಲ್ಲಿ ಎ.ಸಿ ಅವರು ಮೇಲ್ಮನವಿಯನ್ನು ಪುರಸ್ಕರಿ ಪ್ರಸ್ತುತ ಪ್ರತಿವಾದಿಯ ಹೆಸರಿಗೆ ಹಕ್ಕು ಬದಲಾವಣೆಯನ್ನು ಮಾಡಲು ಆದೇಶಿಸಿರುತ್ತಾರೆ ಅಂದರೆ ಸುಳ್ಳು. ಈ ಎಲ್ಲಾ ವಿಚಾರ ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸದರಿ ಎ.ಸಿ ನ್ಯಾಯಾಲಯದ ಆದೇಶದ ವಿರುದ್ಧ ನಾವು ಡಿ.ಸಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತೇವೆ ಅಂದರೆ ಸುಳ್ಳು. ಸದರಿ ಮೇಲ್ಮನವಿಯನ್ನು ಡಿ.ಸಿ ಅವರು ವಜಾ ಮಾಡಿರುತ್ತಾರೆ ಅಂದರೆ ಸುಳ್ಳು. ಸನ್ **2017** ರಲ್ಲಿ ಡಿ.ಸಿ ನ್ಯಾಯಾಲಯದವರು ಸದರಿ ಆದೇಶ ಮಾಡಿರುತ್ತಾರೆ ಅಂದರೆ ಸರಿಯಲ್ಲ. ಸದರಿ ಮೇಲ್ಮನವಿಗಳು ದಾವಾ **1** ಮತ್ತು **2**ನೇ ಆಸ್ತಿಯಲ್ಲಿ ತಲಾ **3** ಎಕರೆ ಜಮೀನಿಗೆ ಸಂಬಂದಿಸಿದಂತೆ ದಾಖಲಾಗಿರುತ್ತವೆ ಅಂದರೆ ಸರಿಯಲ್ಲ. ಸದರಿ ಆದೇಶವು ದಿನಾಂಕ **19.07.2017** ರಂದು ಆಗಿರುತ್ತದೆ. ಆದೇಶದ ಪ್ರತಿಯನ್ನು ತಹಶಿಲ್ದಾರ ಇವರಿಗೆ ತಲುಪಿಸುವ ಪೂರ್ವದಲ್ಲಿಯೇ ನಾವು ಪ್ರಸ್ತುತ ದಾವೆಯನ್ನು ದಾಖಲಿಸಿರುತ್ತೇವೆ ಅಂದರೆ ಸುಳ್ಳು. ಸದರಿ ಆದೇಶದ ಪ್ರತಿಯನ್ನು ತಹಶಿಲ್ದಾರ ಇವರಿಗೆ ಸಲ್ಲಿಸಿದಾಗ ತಹಶಿಲ್ದಾರವರು ನ್ಯಾಯಾಲಯದಲ್ಲಿ ದಾವೆ ಇದೆ ಮುಟೇಶನ್ ಮಾಡುವುದಿಲ್ಲ ಎಂದು ಪ್ರತಿವಾದಿಗೆ ತಿಳಿಸಿರುತ್ತಾರೆ ಅಂದರೆ ಸುಳ್ಳು.

**7.** ದಾವಾ ಅಸ್ತಿಗಳ ಕುರಿತು **1969** ರಲ್ಲಿಯೇ ವ್ಯವಹಾರ ಆಗಿರುವುದರಿಂದ ನನಗೆ ಯಾವುದೇ ಮಾಹಿತಿ ಇಲ್ಲ ಅಂದರೆ ಸಾಕ್ಷಿಯು ನಮ್ಮ ಹಿರಿಯರು ಏನು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಆದರೆ ದಾವಾ ಅಸ್ತಿ ನಮ್ಮದೇ ಅನ್ನುತ್ತಾರೆ. ದಾವಾ **1** ಮತ್ತು **2**ನೇ ಆಸ್ತಿಯಲ್ಲಿ ಒಟ್ಟು **6** ಎಕರೆ ಜಮೀನಿನಲ್ಲಿ **1**ನೇ ಪ್ರತಿವಾದಿಯ ತಂದೆ ಖರೀದಿ ದಿನದಿಂದ ಸ್ವಾಧೀನದಲ್ಲಿದ್ದು ಅವರ ಮರಣದ ನಂತರ ಈಗ ಪ್ರತಿವಾದಿ ಸ್ವಾಧೀನದಲ್ಲಿ ಇರುತ್ತಾರೆ ಅಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಈಗ **40** ವರ್ಷಗಳಿಂದ ನಾವೇ ಸ್ವಾಧೀನದಲ್ಲಿ ಇರುತ್ತೇವೆ ಅನ್ನುತ್ತಾರೆ. ಸೀತಮ್ಮನಿಗೆ **4** ಜನ ಮಕ್ಕಳು, ಅವರೆಂದರೆ ನನ್ನ ಗಂಡ ಮೈಲಾರಪ್ಪ, ಇನ್ನೊಬ್ಬ ಮಗ **2**ನೇ ವಾದಿ, **3**ನೇ ಮಗ ಮಲ್ಲಪ್ಪ ತೀರಿಕೊಂಡಿದ್ದಾನೆ ಮತ್ತು **4**ನೇ ಮಗ ಜೀವಂತ ಇರುತ್ತಾನೆ. **2** ಮತ್ತು **4**ನೇ ವಾದಿಗೆ ದಾವಾ ಜಮೀನುಗಳ ಬಗ್ಗೆ ಸಂಪೂರ್ಣ ಮಾಹಿತ ಇದೆ. ಸನ್ **1969** ರಿಂದ ದಾವಾ ಅಸ್ತಿಯನ್ನು ತಮ್ಮ ಹೆಸರಿಗೆ ಮಾಡಿಸಿಕೊಳ್ಳಲು ಏಕೆ ಅರ್ಜಿಯನ್ನು ಕೊಟ್ಟಿಲ್ಲ ಅಂದರೆ ಸಾಕ್ಷಿಯು ದಾವಾ ಜಮೀನನ್ನು ಸಾಗುವಳಿ ಮಾಡುತ್ತಿರುವುದರಿಂದ ನಾವೇಕೆ ಅರ್ಜಿ ಕೊಡಬೇಕು ಅನ್ನುತ್ತಾರೆ. ದಾವಾ ಅಸ್ತಿಯಲ್ಲಿ ನನಗೆ ಮತ್ತು ಉಳಿದ ವಾದಿಯರಿಗೆ ಯಾವುದೇ ರೀತಿಯ ಹಕ್ಕು ಸ್ವಾಧೀನ ಇರುವುದಿಲ್ಲ ಅಂದರೆ ಸುಳ್ಳು.

**8.** ಸನ್ **1996-97** ರಲ್ಲಿ ಮುಟೇಶನ್ ನಂ **30/1996-97** ರಂತೆ ಸುಳ್ಳು ಮಾಹಿತಿಯನ್ನು ನೀಡಿ ತಮ್ಮ ಹೆಸರಿಗೆ ದಾವಾ ಅಸ್ತಿಯನ್ನು ದಾಖಲು

ಪಡಿಸಿಕೊಂಡಿರುತ್ತಾಳೆ ಅಂದರೆ ಸುಳ್ಳು. ಆ ರೀತಿ ಸುಳ್ಳು ಮುಟೇಶನ್ ಆಧಾರದ ಮೇಲೆ ತನ್ನ ಹೆಸರಿಗೆ ದಾವಾ ಅಸ್ತಿಯನ್ನು ನನ್ನ ಅತ್ತೆ ದಾಖಲಿಸಿಕೊಂಡಿದ್ದು ಸನ್ **2010** ರಲ್ಲಿ ಪುನಃ ಸದರಿ ಆಸ್ತಿಯ ಮುಟೇಶನಿಗಾಗಿ ನಾವು ಅರ್ಜಿ ಸಲ್ಲಿಸಿರುತ್ತೇವೆ ಅಂದರೆ ಸುಳ್ಳು. ಸದರಿ ಮುಟೇಶನ್ ಅನ್ನು ನಮ್ಮ ಅತ್ತೆ ಮಕ್ಕಳನ್ನು ಹೊರತು ಪಡಿಸಿ ತಾನು ಮಾತ್ರ ಮಾಡಿಸಿಕೊಂಡಿರುತ್ತಾಳೆ ಅಂದರೆ ಸುಳ್ಳು.

**9.** ದಾವಾ **1** ಮತ್ತು **2**ನೇ ಆಸ್ತಿಯ ಮೇಲೆ ಪ್ರತಿವಾದಿಗೆ ಅವರ ತಂದೆ ಖರೀದಿ ಮಾಡಿರುವಂತಹ ಖರೀದಿ ಪತ್ರದ ಅಧಾರದ ಮೇಲೆ ಅವರಿಗೆ ಹಕ್ಕು ಅಧಿಕಾರ ಇದೆ ಅಂದರೆ ಸರಿಯಲ್ಲ. ಪ್ರತಿವಾದಿಯು ದಾವಾ ಅಸ್ತಿಯ ಮಾಲೀಕರು ಮತ್ತು ಸ್ವಾಧೀನದಾರರು ಇರುತ್ತಾರೆ ಅಂದರೆ ಸರಿಯಲ್ಲ. ದಾವಾ **1** ಮತ್ತು **2** ಆಸ್ತಿಯ ಮೇಲೆ ನನಗೆ ಮತ್ತು ಉಳಿದ ವಾದಿಯರಿಗೆ ಮೂಲ ದಾಖಲೆಗಳು ಇಲ್ಲದೇ ಇರುವುದರಿಂದ ಯಾವುದೇ ಹಕ್ಕು ಅಧಿಕಾರ ಇಲ್ಲ ಅಂದರೆ ಸರಿಯಲ್ಲ. ಪಹಣಿಯಲ್ಲಿ ನಮ್ಮ ಹೆಸರು ದಾಖಲು ಇದೆ ಅನ್ನುವ ಒಂದು ಕಾರಣಕ್ಕಾಗಿ ದಾವಾ ಅಸ್ತಿಗೆ ನಾವು ಮಾಲೀಕರು ಆಗುವುದಿಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ